AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಕಲ್ಯಾಣ ಕರ್ನಾಟಕದ ಕಾದಂಬರಿ ಸಾಹಿತ್ಯ

**ಡಾ. ರಾಮಚಂದ್ರಪ್ಪ ಗಣಾಪೂರ**
ಕನ್ನಡ ವಿಭಾಗ,
ಗುಲಬರ್ಗಾ ವಿಶ್ವವಿದ್ಯಾಲಯದ
ಸ್ನಾತಕೋತ್ತರ ಕೇಂದ್ರ, ಹಾಲಹಳ್ಳಿ, ಬೀದರ.
rbganapur@gmail.com.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯ ತನ್ನದೇ ಆದಂತಹ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕಾಲಕಾಲಕ್ಕೆ ವೈವಿಧ್ಯಮಯ ಪ್ರಕಾರದಲ್ಲಿ ಕನ್ನಡ ಸಾಹಿತ್ಯ ಭೋರ್ಗರೆದಿದೆ. ಅದರಲ್ಲೂ ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಕನ್ನಡ ತನ್ನದೇ ಆದಂತಹ ಅಸ್ಮಿತೆಯನ್ನು ಹೊರಹೊಮ್ಮಿದೆ. ಇಡೀ ಭಾರತೀಯ ಸಾಹಿತ್ಯ ಕನ್ನಡ ಸಾಹಿತ್ಯದೆಡೆಗೆ ಬೆರಗಾಗಿ ನೋಡುವಂತೆ ಕನ್ನಡ, ಭಾಷೆ ಸಾಹಿತ್ಯ ಉದ್ಭವಿಸಿದೆ. ಆಂಗ್ಲ ಸಾಹಿತ್ಯದ ಪ್ರಭಾವದಿಂದ ಕನ್ನಡ ಸಾಹಿತ್ಯ ಇಟ್ಟ ಹೆಜ್ಜೆ ತೊಟ್ಟ ರೂಪ ಅನನ್ಯ. ಆಂಗ್ಲ ಸಾಹಿತ್ಯದ ಪ್ರಭಾವದಿಂದಾಗಿ ಕನ್ನಡ ಕಥನ ಸಾಹಿತ್ಯ ಹೊಸತನದ ಹೊದಿಕೆಯಲ್ಲಿ ತನ್ನ ಮೂಲ ಪೊರೆಯನ್ನು ಕಳಚಿಕೊಂಡು ಹೊಸ ಅವತಾರದಲ್ಲಿ ಹೊರಹೊಮ್ಮಿತು. ದೀರ್ಘ ಕಥಾ ಹಂದರವುಳ್ಳ ಕಾದಂಬರಿ ಪ್ರಕಾರ ಓದುಗರನ್ನು ಪರಕಾಯಪ್ರವೇಶ ಮಾಡಿಸುವಷ್ಟರ ಮಟ್ಟಿಗೆ ಆಕರ್ಷಕವಾದುದು. ಈ ಕಥನ ಶೈಲಿಯ 'ಕಾದಂಬರಿ' ಪ್ರಕಾರವನ್ನು ಕರಿಯನ್ನು ಕನ್ನಡಿಯಲ್ಲಿ ಹಿಡಿಸಿದಂತೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಂಕ್ಷಿಪ್ತವಾಗಿ ಇಲ್ಲಿ ಅವಲೋಕಿಸಲಾಗಿದೆ.

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ವೈವಿಧ್ಯಮಯ ಪ್ರಕಾರಗಳು ಪ್ರಜ್ವಲಿಸಿದವು. ಅದರಲ್ಲಿ ಕಾದಂಬರಿ ಪ್ರಕಾರವು ಸಹ ಒಂದು, ಸಣ್ಣಕಥೆ ಹಾಗೂ ಕಾದಂಬರಿಗಳು ನಮಗೆ ಪಾಶ್ಚಾತ್ಯರಿಂದಲೇ ಬಂದವೇನೋ ಎನ್ನುವಷ್ಟರ ಮಟ್ಟಿಗೆ ನಮಗೆ ಆವರಿಸಿಕೊಂಡವು. ಆದರೆ ವಾಸ್ತವಿಕವಾಗಿ ಇಂಗ್ಲೀಷ ಸಾಹಿತ್ಯದ ಪ್ರಭಾವ ಕನ್ನಡ ಸಾಹಿತ್ಯದ ಮೇಲಾಗುವುದಕ್ಕಿಂತ ಮುಂಚೆಯೇ ನಮ್ಮಲ್ಲಿ ಕಾದಂಬರಿ ಪರಂಪರೆಯೊಂದಿತ್ತು. ಸಾಹಿತ್ಯಕಾರರು ಹೇಳುವಂತೆ ಯಾದವನ 'ಕಲಾವತಿ ಪರಿಣಯ'(1815), ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ'(1821) ಮತ್ತು ಕೆಂಪು ನಾರಾಯಣನ 'ಮುದ್ರಾಮಂಜೂಷ'(1823) ಮುಂತಾದವು. 1842ರಲ್ಲಿ ಜಾನ್ ಬನ್‌ಯನ್‌ರ 'ದಿ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್', 1857ರಲ್ಲಿ ಡ್ಯಾನಿಯಲ್ ಡಪೋರ 'ರಾಬಿನ್‌ಸನ್ ಕ್ರೂಸೋ' ಕನ್ನಡಕ್ಕೆ ಅನುವಾದಗೊಂಡಂತಹ ಪ್ರಥಮ ಕಾದಂಬರಿಗಳೆನಿಸಿದವು. ಮರಾಠಿಯಿಂದ ಪದಮಂಜಿಯವರ 'ಯಮುನಾ ಪರ್ಯಟನ'(1869), ಬಂಗಾಲಿಯಿಂದ ಬಂಕಿಮಚಂದ್ರರ 'ದುರ್ಗೇಶನಂದಿನಿ'(1885), ತೆಲುಗಿನಿಂದ ವೀರೇಶಲಿಂಗಂ ಪಂತುಲು ಅವರ 'ವಿವೇಕ ಚಂದ್ರಿಕೆ'(1895), ಮಲಯಾಳಿಯಿಂದ ಮುಳಿಯಿಲ್ ಅವರ 'ಸುಕುಮಾರಿ'(1899) ಪ್ರಮುಖವಾದವು. 'ದುರ್ಗೇಶನಂದಿನಿ' ಕೃತಿಗೆ ಬರೆದ ಇಂಗ್ಲಿಷ್ ಪೀಠಿಕೆಯಲ್ಲಿ ವೆಂಕಟಾಚಾರ್ಯರು 'ನಾವೆಲ್' ಪದವನ್ನು ಬಳಸಿದ್ದಾರೆ. ಅದರಲ್ಲಿ ಅವರು ಕಾದಂಬರಿಯ ಬಗ್ಗೆ ಹೇಳುತ್ತಾ 'ಸಮಾಜದ ಹಾಗೂ ಸಮಾಜದ ಅಂಗಭೂತವಾದ ಮನುಷ್ಯನ ಚರಿತ್ರೆ ನಡವಳಿಕೆಗಳಲ್ಲಿ ಕಂಡುಬರುವ ದುರ್ನಡತೆ ಮುಂತಾದವುಗಳನ್ನು ಉದಾಹರಣೆಗಳೊಡನೆ ಚಿತ್ರಿಸಿ ಪ್ರತಿ ಒಬ್ಬನೂ ಸದ್ಭಾವದಿಂದ ನಡೆದುಕೊಳ್ಳುವುದನ್ನು ತೋರ್ಪಡಿಸತಕ್ಕದ್ದಾಗಿದೆ' ಎಂದಿದ್ದಾರೆ. ಕನ್ನಡ ಕಾದಂಬರಿಯ ಸಂದರ್ಭದಲ್ಲಿ 1892ರಲ್ಲಿ ಲಕ್ಷ್ಮಣರಾವ ಗದಗಕರ್ ಅವರ 'ಸೂರ್ಯಕಾಂತ' ಕನ್ನಡದ ಮೊದಲನೆಯ ಸ್ವತಂತ್ರ ಕಾದಂಬರಿಯಾಗಿದೆ. ನಂತರ ಗುಬ್ಬಿ ಮುರುಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ'(1896), ಗಳಗನಾಥರ 'ಪ್ರಬುದ್ಧನಯನೆ'(1898), ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ'(1898) ಪ್ರಮುಖ ಕಾದಂಬರಿಗಳು. ನಂತರದಲ್ಲಿ 1905ರಲ್ಲಿ ಬೋಳಾರ ಬಾಬೂರಾಯರ 'ವಾಗ್ದೇವಿ', ಕೆರೂರು ವಾಸುದೇವಚಾರ್ಯರ 'ಇಂದಿರೆ'(1908) 'ಇಂದಿರಾಬಾಯಿ' ಕಾದಂಬರಿಯ ನಂತರದಲ್ಲಿ ಸಾಹಿತ್ಯದ ದೃಷ್ಟಿಯಿಂದ ಹೆಸರಿಸಬಹುದಾದ ಮೊಟ್ಟ ಮೊದಲ ಕೃತಿ ಎಂ. ಎಸ್. ಪುಟ್ಟಣ್ಣರವರ 'ಮಾಡಿದ್ದುಣ್ಣೊ ಮಹರಾಯ'(1915).

ಕನ್ನಡದಲ್ಲಿ ವೆಂಕಟಾಚಾರ್ಯ, ಗಳಗನಾಥ, ಎಂ .ಎಸ್. ಪುಟ್ಟಣ್ಣರವರ ನಂತರ 20ನೆಯ ಶತಮಾನದಲ್ಲಿ ಕಾದಂಬರಿ ಸಮೃದ್ಧವಾಗಿ ಬೆಳೆಯಿತು. ಶಿವರಾಮ ಕಾರಂತರ 'ದೇವದೂತರು'(1928), ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ'(1933), ರಂ.ಶ್ರೀ.ಮುಗಳಿಯವರ 'ಬಾಳುರಿ'(1934), ಆನಂದಕಂದರ 'ರಾಜಯೋಗಿ'(1935), ಅ.ನ.ಕೃ ಅವರ 'ಸಂಧ್ಯಾರಾಗ', ಜಡಭರತರ 'ಧರ್ಮಸೆರೆ', ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ'(1936) ಹೊರಬಂದವು. 1920ರಿಂದ 1945ರ ಅವಧಿಯಲ್ಲಿ ಕನ್ನಡದಲ್ಲಿ ಸುಮಾರು ಎಂಬತ್ತು ಕಾದಂಬರಿಗಳು ಪ್ರಕಟವಾದವು, ಇವುಗಳನ್ನು ಬರೆದವರು ನಲ್ವತ್ತು ಜನರು. ಹೇಗೆ ಕಾವ್ಯ ಪ್ರಕಾರದಲ್ಲಿ ಬೇಂದ್ರೆ–ಕುವೆಂಪು ಪ್ರಭಾವ ಬೀರಿದಂತೆ ಕಾದಂಬರಿಯಲ್ಲಿ ಕಾರಂತ–ಅ.ನ.ಕೃ ಪ್ರಭಾವ ಬೀರಿದರು. ಹೀಗಾಗಿ ಕಾದಂಬರಿ ಕ್ಷೇತ್ರ ಸತ್ವಯುತವಾಗಿ, ಹುಲುಸಾಗಿ ಬೆಳೆಯಲು ಕಾರಣವಾಯಿತು. ಕಾದಂಬರಿ ಕ್ಷೇತ್ರದ ಇನ್ನೊಬ್ಬ ಮಹಾಪುರುಷ ದೇವುಡು ನರಸಿಂಹಶಾಸ್ತ್ರಿಗಳು. ಇವರ ಪ್ರಮುಖ ಕಾದಂಬರಿಗಳು 'ಅಂತರಂಗ'(1930), 'ಮಹಾಬ್ರಾಹ್ಮಣ'(1951), 'ಮಹಾಕ್ಷತ್ರಿಯ'(1962), 'ಮಹಾದರ್ಶನ'(1977) ದೇವುಡು ಅವರ ಬೃಹತ್ ಕಾದಂಬರಿಗಳು ಪೌರಾಣಿಕ ಯುಗವನ್ನು ದರ್ಶನ ಮಾಡಿಸಿದವು. ಅನೇಕ ಮಹನೀಯರು ಕನ್ನಡ ಕಾದಂಬರಿ ಲೋಕವನ್ನು ತಮ್ಮ ಪ್ರತಿಭೆಯಿಂದ ಶ್ರೀಮಂತಗೊಳಿಸಿದರು. ಮುಂದೆ ಕುವೆಂಪು, ಕಾರಂತ, ಶ್ರೀರಂಗ, ಗೋಕಾಕ್, ಎಂ. ವಿ. ಸೀತಾರಾಮಯ್ಯ, ಎನ್ಕೆ, ಕೃಷ್ಣಮೂರ್ತಿ ಪುರಾಣಿಕ, ಎಂ. ಆರ್. ಶ್ರೀನಿವಾಸಮೂರ್ತಿ, ಕಡಂಗೋಡ್ಲು ಶಂಕರಭಟ್ಟ, ಎಸ್. ಅನಂತನಾರಾಯಣ, ವ್ಯಾಸರಾಯ ಬಲ್ಲಾಳ, ಮಿರ್ಜಿ ಅಣ್ಣಾರಾಯರು, ಚದುರಂಗ, ರಾಮಚಂದ್ರ ಕೊಟ್ಟಲಗಿ, ಎಂ.ಆರ್.ಶ್ರೀ, ಕಸ್ತೂರಿ, ಅ.ನ.ಕೃ, ಬಸವರಾಜ ಕಟ್ಟೀಮನಿ, ತ.ರಾ.ಸುಬ್ಬರಾವ್, ನಿರಂಜನ, ಅರ್ಚಕ ವೆಂಕಟೇಶ, ನಾಡಿಗೇರ ಕೃಷ್ಣಾರಾವ್, ಕುಮಾರ ವೆಂಕಣ್ಣ, ವಿ. ಎಂ. ಇನಾಂದಾರ್, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ಅನಂತನಾರಾಯಣ, ಬಿ.ಪುಟ್ಟಸ್ವಾಮಯ್ಯ, ವೀರಕೇಸರಿ, ಸೀತಾರಾಂ ಶಾಸ್ತ್ರಿ, ಕೊರಟಿ ಶ್ರೀನಿವಾಸರಾವ್, ಮಾಸ್ತಿ, ಕೆ. ವಿ. ಅಯ್ಯರ್, ಮ. ನ. ಮೂರ್ತಿ, ತಿಪ್ಪೇರುದ್ರಸ್ವಾಮಿ, ದೇಸಾಯಿ ಪಾಂಡುರಂಗಾವ್, ಗೋವಿಂದಮೂರ್ತಿ, ದೇಸಾಯಿ, ಸೂರ್ಯನಾಥ ಕಾಮತ್, ಟಿ. ಕೆ. ರಾಮರಾವ್, ಕೋ. ಚೆನ್ನಬಸಪ್ಪ ಮುಂತಾದವರು.

ಕೇವಲ ಮೂವತ್ತೈದನೆಯ ಪ್ರಾಯದಲ್ಲಿಯೇ ಅಗಲಿದ ಮಹಾನ್ ಕಾದಂಬರಿಗಾರ್ತಿ ತ್ರಿವೇಣಿಯವರು ಕನ್ನಡ ಕಾದಂಬರಿ ಇತಿಹಾಸದಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಯಾಗಿಸಿದವರು. ಹೆಣ್ಣುಮಕ್ಕಳು ಬರೆಯಲಾರದಂತಹ ಕಾಲದಲ್ಲಿಯೇ ಮನಶಾಸ್ತ್ರೀಯ ನೆಲೆಯ ಕಾದಂಬರಿಗಳನ್ನು ನೀಡಿದರು. ಅವರ 'ಬೆಕ್ಕಿನ ಕಣ್ಣು', 'ಶರಪಂಜರ' ಇವರ ಮಹತ್ವದ ಕೃತಿಗಳು. ನಂತರದಲ್ಲಿ ಅನೇಕ ಮಹಿಳೆಯರು ಕಾದಂಬರಿ ಬರೆಯಲು ತೊಡಗಿಸಿಕೊಂಡರು. ಅವರಲ್ಲಿ ಎಂ. ಕೆ. ಇಂದಿರಾ, ಅನುಪಮಾ ನಿರಂಜನ, ಗೀತಾ ನಾಗಭೂಷಣ, ವೈದೇಹಿ, ಆರ್ಯಾಂಭ ಪಟ್ಟಾಭಿ, ಪಿ. ಮಾಲತಿ, ಬಿ. ಟಿ. ಲಲಿತಾ ನಾಯಕ, ಎಚ್. ಎಸ್. ಪಾರ್ವತಿ, ಸಿ. ಎನ್. ಜಯಲಕ್ಷ್ಮಿದೇವಿಯವರು ಪ್ರಮುಖರು.

ನವ್ಯದಲ್ಲಿ ಶಾಂತನಾಥ ದೇಸಾಯಿ, ಕೆ. ವಿ. ಅಯ್ಯರ್, ಶಂಕರ ಮೊಕಾಶಿ ಪುಣೇಕರ್, ರಾವ್‌ಬಹದ್ದೂರ, ಎಸ್. ಎಲ್. ಭೈರಪ್ಪ, ಯಶವಂತ ಚಿತ್ತಾಲ, ಲಂಕೇಶ, ಯು. ಆರ್. ಅನಂತಮೂರ್ತಿ, ಕುಸುಮಾಕರ, ಪೂರ್ಣಚಂದ್ರ ತೇಜಸ್ವಿ, ರಾಮಾನುಜನ್, ಶ್ರೀಕೃಷ್ಣ ಅಲನಹಳ್ಳಿ, ಬಿ. ವೈಕುಂಠರಾಜು, ಜನಾರ್ಧನ್ ಗುರಿಕಾರ, ಟಿ. ಕೆ. ರಾಮರಾವ್, ಸೂರ್ಯನಾರಾಯಣ ಚಡಗ, ಜಯತೀರ್ಥ ರಾಜಪುರೋಹಿತ, ಎಚ್. ಎಲ್. ನಾಗೇಗೌಡ ಮುಂತಾದ

ಮಹನೀಯರು ಕನ್ನಡ ಕಾದಂಬರಿ ಲೋಕವನ್ನು ಶ್ರೀಮಂತಗೊಳಿಸಿದರು. ಕನ್ನಡ ಸಾಹಿತ್ಯವನ್ನು ಇತರ ಭಾರತೀಯ ಭಾಷೆಗಳಲ್ಲಿಯೇ ಸಮರ್ಥ ಸಾಹಿತ್ಯ ಹಾಗೂ ಉತ್ಕೃಷ್ಟ ಭಾಷೆಯನ್ನಾಗಿ ಬಿಂಬಿಸಿದರು. ಹೀಗಾಗಿ ಕಾದಂಬರಿ ಪ್ರಕಾರ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಉತ್ತುಂಗಕ್ಕೇರಿತು.

ಅಂದಿನ ಹೈದ್ರಾಬಾದ ಕರ್ನಾಟಕ ಪ್ರದೇಶ ಹಾಗೂ ಇಂದಿನ ಕಲ್ಯಾಣ ಕರ್ನಾಟಕವೆಂಬ ಪ್ರದೇಶದ ಕೊಡುಗೆಯೂ ಕಾದಂಬರಿ ಕ್ಷೇತ್ರಕ್ಕೆ ಅಪಾರವಾದುದು. ಹೈದ್ರಾಬಾದ ಕರ್ನಾಟಕದ ಬಿರು ಬಿಸಿಲು ಹೇಗೋ ಅಲ್ಲಿನ ಬರಹವೂ ಅಷ್ಟೇ ಪ್ರಖರವಾದುದು. ತುಂಬಾ ಗಟ್ಟಿಯಾದ ಸಾಹಿತ್ಯ ಈ ಭಾಗದ ಹೆಮ್ಮೆಯಾಗಿದೆ. ಆರಂಭದಲ್ಲಿ ಕಥಾ ಸಾಹಿತ್ಯ ತುಂಬಾ ವಿಪುಲವಾಗಿ ಬೆಳೆದರೂ ಸ್ವಾತಂತ್ರ್ಯಾ ನಂತರ ಕಾದಂಬರಿ ಸಾಹಿತ್ಯ ವೇಗವಾಗಿ ಬೆಳೆಯಿತು. ಈ ಭಾಗದ ಮಹತ್ವದ ಕಾದಂಬರಿಕಾರರಲ್ಲಿ ಜಯತೀರ್ಥ ರಾಜಪುರೋಹಿತ, ಶಾಂತರಸ, ಗೀತಾ ನಾಗಭೂಷಣ, ಚೆನ್ನಣ್ಣ ವಾಲೀಕಾರ, ಬಿ. ಟಿ. ಲಲಿತಾ ನಾಯಕ, ಕುಂ.ವೀ, ಪಿ. ಬಿ. ದೇಸಾಯಿ, ಸುಬ್ಬಣ್ಣ ಅಂಬೆಸಂಗೆ ಮುಂತಾದ ಮಹನೀಯರು ಈ ಭಾಗದ ಕಾದಂಬರಿ ಕ್ಷೇತ್ರವನ್ನು ತಮ್ಮ ಸತ್ವಯುತ ಬರಹದಿಂದ ಶ್ರೀಮಂತಗೊಳಿಸಿದ್ದಾರೆ. ಇವರ ಕಾದಂಬರಿಗಳ ವಸ್ತು ಮುಖ್ಯವಾಗಿ ಸ್ವಾತಂತ್ರ್ಯಾ ನಂತರದ ಪರಿಸ್ಥಿತಿ ಸಾಮಾಜಿಕ ಅಸಮಾನತೆ, ಊಳಿಗಮಾನ್ಯ ವ್ಯವಸ್ಥೆ, ಜಮೀನ್ದಾರಿ ಪದ್ಧತಿ, ದಬ್ಬಾಳಿಕೆ, ಹಸಿವು, ಬಡತನ, ಸ್ತ್ರೀ ಶೋಷಣೆ, ನಿರುದ್ಯೋಗಗಳ ಜೊತೆಗೆ ಮೇಲ್ವರ್ಗದವರ, ಪುರೋಹಿತಶಾಹಿಗಳ ಧಾರ್ಮಿಕ ಕಟ್ಟಳೆಗಳನ್ನೊಂಡಿವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದ ಕಾದಂಬರಿಕಾರರಲ್ಲಿ ಶಾಂತರಸ, ಗೀತಾ ನಾಗಭೂಷಣ, ಚೆನ್ನಣ್ಣ ವಾಲೀಕಾರ, ಚಂದ್ರಕಾಂತ ಕುಸನೂರು, ಬಿ. ಟಿ. ಲಲಿತಾ ನಾಯಕ, ಕುಂ.ವೀ, ಜಯತೀರ್ಥ ರಾಜಪುರೋಹಿತ ಮುಂತಾದವರು ಆರಂಭದ ಕಾದಂಬರಿಕಾರರು. ಇವರಲ್ಲಿ ಅಧಿಕ ಕಾದಂಬರಿಗಳನ್ನು ರಚಿಸಿದವರು ಗೀತಾ ನಾಗಭೂಷಣರವರು. ಶಾಂತರಸರು ಒಂದು ಕಾದಂಬರಿ, ಬಿ.ಟಿ.ಲಲಿತಾ ನಾಯಕರವರು ಎರಡು ಮತ್ತು ಚೆನ್ನಣ್ಣ ವಾಲೀಕಾರರು ಐದು ಕಾದಂಬರಿಗಳನ್ನು ರಚಿಸಿದ್ದಾರೆ. ಪುಟದ ಮಿತಿಯಿಂದಾಗಿ ಕಾದಂಬರಿಕಾರರ ಹಾಗೂ ಅವರ ಕಾದಂಬರಿಗಳ ಕುರಿತಾಗಿ ಸಂಕ್ಷಿಪ್ತ ವಿವರಗಳನ್ನಷ್ಟೇ ದಾಖಲಿಸಲು ಪ್ರಯತ್ನಿಸಿದ್ದೇನೆ.

ಕಾದಂಬರಿ ಸಾಹಿತ್ಯಕ್ಕೆ ಕಲಬುರ್ಗಿ ಜಿಲ್ಲೆಯ ಕೊಡುಗೆ ಅಮೋಘವಾದುದು. ಪ್ರಾತಿನಿಧಿಕವಾಗಿ ಕೆಲವು ಕಾದಂಬರಿ ಹಾಗೂ ಬರಹಗಾರರನ್ನು ಅವಲೋಕಿಸಲಾಗಿದೆ. ಗೀತಾ ನಾಗಭೂಷಣರವರು ಹಲವು ಪ್ರಥಮಗಳ ಮಹಿಳೆಯಾಗಿ ಈ ಕಲ್ಯಾಣ ಕರ್ನಾಟಕದ ಕೀರ್ತಿಯನ್ನು ಇಮ್ಮಡಿಗೊಳಿಸಿದವರು. ಕಲಬುರ್ಗಿ ಭಾಷೆಯನ್ನು ಸಶಕ್ತವಾಗಿ ತಮ್ಮ ಕತೆ ಹಾಗೂ ಕಾದಂಬರಿಗಳಲ್ಲಿ ಬಳಸಿಕೊಂಡವರು. ದೇಶೀ ಭಾಷೆಯ ಸೊಗಡನ್ನು ತಮ್ಮ ಕೃತಿಗಳಲ್ಲಿ ಶಕ್ತಿಯುತವಾಗಿ ಬಳಸಿದರ ಫಲವಾಗಿ ವಸ್ತು ಹಾಗೂ ಶೈಲಿ ಎಲ್ಲರನ್ನು ಚುಂಬಕಶಕ್ತಿಯಂತೆ ಸೆಳೆಯಿತು. ಅವರು 30ಕ್ಕೂ ಅಧಿಕ ಕಾದಂಬರಿಗಳನ್ನು ರಚಿಸಿದವರು. ಅವರ 'ಬದುಕು' ಕಾದಂಬರಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ತಂದುಕೊಟ್ಟಂತಹ ಕೃತಿ. ಅವರ ಎಲ್ಲಾ ಕಾದಂಬರಿಗಳಲ್ಲಿ 'ಬದುಕು' ಕಾದಂಬರಿ ವಸ್ತು ಹಾಗೂ ಗಾತ್ರದ ದೃಷ್ಟಿಯಿಂದ ಗಮನಸೆಳೆಯುವಂಥದ್ದು. ಸುಮಾರು 616 ಪುಟಗಳ ಬೃಹತ್ ಮತ್ತು ಮಹತ್ ಕಾದಂಬರಿ. ಇದರಲ್ಲಿ ಹೈದ್ರಾಬಾದ ಕರ್ನಾಟಕದ ಅದರಲ್ಲೂ ಕಲಬುರಗಿ ಜಿಲ್ಲೆಯ ಗ್ರಾಮೀಣ ಸಂಸ್ಕೃತಿ ಹಾಗೂ ಜೀವನವ್ಯಾಪಾರವನ್ನು ವಿಭಿನ್ನವಾಗಿ ಕಟ್ಟಿಕೊಟ್ಟಂತಹ ಕಾದಂಬರಿ. ಈ ಭಾಗದಲ್ಲಿನ ಮೇಲ್ವರ್ಗದವರ ದೌರ್ಜನ್ಯ, ಹೆಣ್ಣುಮಕ್ಕಳ ದಯನೀಯ ಸ್ಥಿತಿ, ಬಡತನ, ಹಸಿವಿನ ದಾರುಣತೆ ಇವೆಲ್ಲವನ್ನು ಕೆಳವರ್ಗದಿಂದ ಬಂದಂತಹ ಗೀತಾ ನಾಗಭೂಷಣರವರು ಕಣ್ಣಿಗೆ ಕಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಸಮಾಜದಲ್ಲಿನ ಸಾಚಾತನದ ಹುಳುಕು ಮುಖವಾಡಗಳನ್ನು ಸಮರ್ಥವಾಗಿ ಬಿಚ್ಚಿಟ್ಟಿದ್ದಾರೆ. ಕಾದಂಬರಿಯ ಕೇಂದ್ರ ಸ್ಥಾನ ಕಲಬುರ್ಗಿ ಜಿಲ್ಲೆಯ ಶಿವಳ್ಳಿ. ಆ ಗ್ರಾಮದ ಕೆಳವರ್ಗದ ಸಮುದಾಯವೊಂದರ ಬದುಕಿನ ವಿವಿಧ ಆಯಾಮಗಳು ಕಾದಂಬರಿಯ ಒಡಲಲ್ಲಿವೆ. ಇಲ್ಲಿನ ಕಥೆ ನಿಜಾಮರ ಕಾಲದ ಸ್ವಾತಂತ್ರ್ಯಪೂರ್ವದ ಪರಿಸ್ಥಿತಿಯನ್ನು ಬಿಂಬಿಸುತ್ತದೆ. ಗೀತಾ ನಾಗಭೂಷಣ ಅವರು 'ನೀಲಗಂಗಾ', 'ಹಸಿಮಾಂಸ ಮತ್ತು ಹದ್ದುಗಳು', 'ಕಾಗೆ ಮುಟ್ಟಿತು', 'ಗುಳೆ', 'ಬಾಕಿ' ಹೀಗೆ ಮೂವತ್ತಕ್ಕೂ ಅಧಿಕ ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ ಗಟ್ಟಿ ಬರಹಗಾರರು.

ಹೈದ್ರಾಬಾದ ಕರ್ನಾಟಕದ ಬಂಡಾಯ ಸಾಹಿತ್ಯದ ಸೂರ್ಯ, ದೈತ್ಯ ಬರಹಗಾರ ಡಾ. ಚೆನ್ನಣ್ಣ ವಾಲೀಕಾರರವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪೂರ್ವ. ಕಲ್ಯಾಣ ಕರ್ನಾಟಕ ಎಂದಾಕ್ಷಣ ಮೈಸೂರು ಕರ್ನಾಟಕದವರಿಗೆ ಗೀತಾ ನಾಗಭೂಷಣ ಹಾಗೂ ಚೆನ್ನಣ್ಣ ವಾಲೀಕಾರರವರು ತಮ್ಮ ಗಟ್ಟಿ ಹಾಗೂ ನಿರ್ಭಿಡೆಯ ಬರಹದಿಂದಾಗಿ ಗಮನಸೆಳೆಯುತ್ತಾರೆ. ಇವರು ಬೇರೆ ಸಾಹಿತ್ಯದಂತೆ ಅದ್ಭುತ ಕಾದಂಬರಿಗಳನ್ನು ನೀಡಿದವರು. ಅವರ 'ಕೋಟೆ', 'ಒಂದು ಹೆಣ್ಣಿನ ಒಳಜಗತ್ತು', 'ವಿರಹರವಿ', 'ಹುಲಗೆಮ್ಮ' 'ಬೆಳ್ಳ್ಯ', 'ಗ್ರಾಮಭಾರತ' ಕಾದಂಬರಿಗಳನ್ನು ಬರೆದು ಈ ಭಾಗದ ಚಿತ್ರಣ ಕಟ್ಟಿಕೊಟ್ಟಿದ್ದಾರೆ.

ಚಂದ್ರಕಾಂತ ಕುಸನೂರರವರು ಅಸಂಗತ ನಾಟಕಗಳಿಗೆ ಹೆಸರಾದಂತೆ ಕಾದಂಬರಿ ಸಾಹಿತ್ಯದಲ್ಲಿಯೂ ಸಹ 'ಚರ್ಚ್‌ಗೇಟ್', 'ಗೋಹರ ಜಾನ್', 'ಮಾಲತಿ ಮತ್ತು ನಾನು' ಹಾಗೂ 'ಯಾತನಾ ಶಿಬಿರ' ಎಂಬ ಮೂರು ಕಾದಂಬರಿಗಳನ್ನು ರಚಿಸಿದ್ದಾರೆ. ಗವಿಶ ಹಿರೇಮಠ ಅವರ 'ಬದುಕು ಚದುರಂಗದಾಟ' ಮತ್ತು 'ಹಕ್ಕಿ ಗೂಡು ಸೇರಿತು', 'ಚಿತ್ರಶೇಖರ ಕಂಠಿಯವರ 'ದಡ ಸೇರದ ದೋಣಿ' ಮತ್ತು 'ಪಯಣಿಗ', 'ಮಧುಚಂದ್ರ ಮಂಚದಲಿ', 'ಹೊಂಬಿಸಿಲ ಚಿಂಚನ', ಪ್ರಮುಖ ಕೃತಿಗಳು. ಡಾ. ಕೃಷ್ಣಮೂರ್ತಿ ಕಿತ್ತೂರ ಅವರು 'ನಿರೀಕ್ಷಣೆ' ಎಂಬ ಒಂದು ಕಾದಂಬರಿ ಬರೆದಿರುವರು. ವಾಗ್ದೇವಿ ಪಾಟೀಲರು 'ಜೀವನ ಸಂಗ್ರಾಮ', ರಾಜು ಕುಲಕರ್ಣಿಯವರು 'ಅವಳಿಗಾಗಿ', ಸರಿತಾ ಕುಸುಮಾಕರ ದೇಸಾಯಿಯವರು 'ನೆಲಕಡಲು', ಪ್ರಮಿಳಾ ಜಾನಪ್ಪಗೌಡರ 'ಗೂಡು ಸೇರಿತು ಹಕ್ಕಿ', ಬಸವರಾಜ ಉಪ್ಪಿನ ಅವರು 'ಆಹುತಿ' ಎಚ್. ಟಿ. ಪೋತೆಯವರು 'ಬಯಲೆಂಬೊ ಬಯಲು' ಎಂಬ ಬಯೋಪಿಕ್ ಕಾದಂಬರಿಯನ್ನು ರಚಿಸಿದ್ದಾರೆ. ಲಕ್ಷ್ಮಣ ಕೌಂಟೆಯವರು ಬೃಹತ್ ಕಾದಂಬರಿಗಳನ್ನು ರಚಿಸುವಲ್ಲಿ ಸಿದ್ಧಹಸ್ತರು. ಅವರ 'ವಿದ್ರೋಹ', 'ಉತ್ಪಾತ', 'ಕಿಷ್ಕಿಂದಾಯಣ', 'ಯುಗಪುರುಷ', ಹಾಗೂ 'ಅವಿಶ್ರಾಂತ' ಎಂಬ ಮಹತ್ವದ ಕೃತಿಗಳನ್ನು ನೀಡಿದವರು. ಶಿವಾನಂದ ಬೇಕಲ್ ಅವರ 'ಮಳೆ ನಿಂತ ಮೇಲಿನ ಮರ', ಲಾಲ ಮಹಮ್ಮದ ಉಸ್ತಾದ ಅವರ 'ಗುಡ್ಡದವ', ಎಚ್. ಬಿ. ರುದನೂರು ಅವರ 'ಕರಿಕಲ್ಲ ಗುಡ್ಡದ ಮೇಲೆ' ಗುರುಶಾಂತಪ್ಪ ಬಿ.ಪೋಲೀಸ್ ಪಾಟೀಲರ 'ತಾಯಿ ತಾತಮ್ಮ', 'ನ್ಯಾಯ ಮಲಗಿದಾಗ', ಸಂತೋಷಕುಮಾರ ತೋಟ್ನಳ್ಳಿಯವರ 'ಕಾಲೇಜು ರಂಗಭೂಮಿ', 'ಕಹಿಯಾದ ನೆನಪುಗಳು', ಸ್ವಾಮಿರಾವ ಕುಲಕರ್ಣಿಯವರ 'ದೆವ್ವನ ಬಾವಿ', ಪ್ರಭಾಕರ ಜೋಶಿಯವರ 'ಮೋಹಪುರ', ಶಂಕರಗೌಡ ಬಿ.ಪಾಟೀಲ ತಿಳಿಗೊಳ ಅವರ 'ತೊರೆದ ಗೂಡು', 'ಕಾಳು ಕಟ್ಟದ ಕಣ್ಣೀರು', 'ನೆಲದ ನಂಟು', 'ಭೀಮಾ ತೀರದ ತಂಗಾಳಿ' ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಕಾವ್ಯಶ್ರೀ ನಾಗಭೂಷಣರವರು(ಸಿಕಾ) 'ಪ್ರೇಮ ಕಾವ್ಯ', ಹಾಗೂ 'ಒಳ್ಕಲ್ಲ ಒಡಲು' ಎಂಬ ಎರಡು ಕಾದಂಬರಿಗಳನ್ನು ರಚಿಸಿದ್ದಾರೆ.

ಕಲ್ಯಾಣ ಕರ್ನಾಟಕದ ಕಾದಂಬರಿಕಾರ್ತಿಯಾದ ಬಿ. ಟಿ. ಲಲಿತಾ ನಾಯಕರವರ 'ನೆಲೆ ಬೆಲೆ' ಮತ್ತು 'ಗತಿ' ಕಾದಂಬರಿಗಳು ಬಂಡಾಯ ಘಟ್ಟದ ಪ್ರಮುಖ ಕಾದಂಬರಿಗಳು. 80ರ ದಶಕದ ಪ್ರಮುಖ ಕಾದಂಬರಿ 'ನೆಲೆ ಬೆಲೆ' ಅಂದಿನ ಸುಧಾ ವಾರಪತ್ರಿಕೆಯ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದೆ. ಜನಪರ ಕಾಳಜಿಯ ವಸ್ತುವನ್ನೊಳಗೊಂಡ ಅವರ ಕಾದಂಬರಿಗಳು ಜೀವಪರ ನಿಲುವುಗಳನ್ನೊಳಗೊಂಡಿವೆ. ಇವರು ಕೇವಲ ಎರಡೇ ಕಾದಂಬರಿಗಳನ್ನು ರಚಿಸಿದ್ದರೂ ಸಹ ತುಂಬಾ ಮೌಲಿಕ ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ.

ಕೊಟ್ಟೂರಿನ ಕುಂ. ವೀರಭದ್ರಪ್ಪನವರು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮರೆಯಲಾರದಂತಹದ್ದು. ಅವರ 'ಕಪ್ಪು', 'ಶಾಮಣ್ಣ', 'ಅರಮನೆ' 'ಬೇಲಿ ಮತ್ತು' ತಮ್ಮದೇ ಛಾಪನ್ನು ಮೂಡಿಸಿವೆ. ಈ ಭಾಗದ ಮಹತ್ವದ ಕಾದಂಬರಿಕಾರರಲ್ಲಿ ಸಂಶೋಧಕರಾದ ಪಿ. ಬಿ. ದೇಸಾಯಿಯವರ 'ಕುಂತಲೇಶ್ವರ ಮದಗಜಮಲ್ಲ' ಬೀಚಿಯವರ 'ದಾಸಕೂಟ' 'ಆರಿದ ಚಹಾ' 'ನಂಬರ್ ಐವತ್ತೈದು', 'ಖಾದಿ ಸೀರೆ', 'ಮೇಡಂನ ಗಂಡ' ಮುಂತಾದ ಹಾಸ್ಯ ಶೈಲಿಯ ಕಾದಂಬರಿಗಳಿಂದ ಪ್ರಸಿದ್ಧರಾದರು. ರಾಜಪುರೋಹಿತರು 'ಸುಳಿಗಾಳಿ', 'ಹಾಲುಜೇನು', 'ಜೋಹಾರ್', 'ಕಡಲ ತೋಳ' ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಮಲ್ಲಿಕಾರ್ಜುನ ಹಿರೇಮಠರು 'ಹವನ' ಕಾದಂಬರಿ ರಚಿಸಿದರು. ಯಲಬುರ್ಗಿಯ ವೀಣಾ ಶಾಂತೇಶ್ವರ ಅವರು 'ಕೊನೆಯ ದಾರಿ', 'ಗಂಡಸರು' ಬರೆದರು. ಈ ಭಾಗದಲ್ಲಿ ಎಚ್. ಜಿ. ರಾಧಾದೇವಿಯವರು ನೂರಕ್ಕೂ ಅಧಿಕ ಕಾದಂಬರಿಗಳನ್ನು ಕನ್ನಡ ಸಾಹಿತ್ಯದ ಗಣಿಗೆ ನೀಡಿದ್ದಾರೆ. ಅದರಲ್ಲಿ 'ಸುವರ್ಣ ಸೇತುವೆ', 'ಸೊಬಗಿನ ಸೆರೆಮನೆ', 'ಕತ್ತಲಲ್ಲಿ ಕಂಡ ಮಿಂಚು' ಮುಂತಾದವು.

ರಾಯಚೂರಿನ ಶಾಂತರಸರ ಒಂದೇ ಕಾದಂಬರಿ 'ಸಣ್ಣ ಗೌಡಸಾನಿ' 128 ಪುಟಗಳ ಚಿಕ್ಕ ಕಾದಂಬರಿ. ಈ ಕಾದಂಬರಿಯಲ್ಲಿ ಹೆಣ್ಣಿನ ಮಾತೃವಾತ್ಸಲ್ಯವನ್ನು ಹೃದಯಂಗಮವಾಗಿ ಕಟ್ಟಿಕೊಟ್ಟಿದ್ದಾರೆ. ಈ ಪುಟ್ಟ ಕಾದಂಬರಿ ಸಣ್ಣಗೌಡಸಾನಿಯಲ್ಲಿ ಸೂಗನಗೌಡನ ಎರಡನೆಯ ಹೆಂಡತಿ ಮಾಬಿ ಈ

ಕಾದಂಬರಿಯ ಕೇಂದ್ರ ಪಾತ್ರ. ಮಲತಾಯಿಯಾಗಿ ಬಂದರೂ ಸೂಗನಗೌಡನ ಮಗ ಭೀಮನಗೌಡನಿಗೆ ತಾಯಿಯ ವಾತ್ಸಲ್ಯವೆರೆದ ಮಹಾತಾಯಿಯಾಗಿ ಕಂಗೊಳಿಸುತ್ತಾಳೆ. ಕಾದಂಬರಿಯಲ್ಲಿನ ಬಿಸಿಲ ನೆಲ ರಾಯಚೂರಿನ ಭಾಷೆ ಮಡುಗಟ್ಟಿ ನಿಂತಿದೆ. ಶಾಂತರಸರು ಒಂದೇ ಕಾದಂಬರಿಯಿಂದ ಈ ಪ್ರದೇಶದ ಭಾಷಿಕ ಹಿರಿಮೆಯನ್ನು ಕನ್ನಡ ಸಾಹಿತ್ಯದಲ್ಲಿ ಅಜರಾಮರಗೊಳಿಸಿದ್ದಾರೆ. ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ', ಎಂ. ಜೀವನರವರು 'ಹುತಾತ್ಮನ ಹೆಂಡತಿ', ಡಾ. ಸಿದ್ಧಯ್ಯ ಪುರಾಣಿಕರ 'ತ್ರಿಭುವನ ಮಲ್ಲ', ಡಾ. ಪಂಚಾಕ್ಷರಿ ಹಿರೇಮಠರವರು ಬೇರೆ ಭಾಷೆಗಳಿಂದ ಕಾದಂಬರಿಗಳನ್ನು ಅನುವಾದಿಸಿದ್ದಾರೆ. ದೇವೇಂದ್ರಕುಮಾರ ಹಕಾರಿಯವರು 'ಚೆಲ್ವಿ ಕೋಗಿಲೆ' ಮತ್ತು 'ಕೂಗುತಿವೆ ಕಲ್ಲು' ಎಂಬ ಎರಡು ಕಾದಂಬರಿಗಳನ್ನು ರಚಿಸ್ದಾರೆ. ಬಳ್ಳಾರಿ ಜಿಲ್ಲೆಯ ಕೋ.ಚೆನ್ನಬಸಪ್ಪರವರು 'ಹಿಂದಿರುಗಿ ಬರಲಿಲ್ಲ', 'ನೊಗದರಗಳೂ', ರಕ್ತ ತರ್ಪಣ' ಕಾದಂಬರಿಗಳನ್ನು ರಚಿಸಿದರು. ಕೊಟ್ನೇಕಲ್ ವೆಂಕೋಬ ಅವರ 'ಅಪರಾಧಿ ಯಾರು' ಡಾ. ಶ್ರೀನಿವಾಸ ಕುಲಕರ್ಣಿಯವರ 'ನೆಳಲು ನೆನಪು', 'ತೇರು', 'ಸಶೇಷ' ಕಾದಂಬರಿಗಳ ಮೂಲಕ ಕೊಪ್ಪಳ ಭಾಗದ ಜನಜೀವನ, ವಿಮೋಚನಾ ಚಳುವಳಿ, ರಜಾಕಾರರ ದಿನಗಳನ್ನು ಕಟ್ಟಿಕೊಟ್ಟಿದ್ದಾರೆ.

ಬೀದರ ಜಿಲ್ಲೆಯ ಸುಬ್ಬಣ್ಣ ಅಂಬೆಸಂಗೆಯವರ 'ಸಿಂದಿ ಬನದಲ್ಲಿ ಸಿಕ್ಕವಳು', ಎಂ. ಜಿ. ದೇಶಪಾಂಡೆಯವರ 'ಆಶಾಕಿರಣ', 'ಮೀರಾಬಾಯಿ', 'ಪ್ರಕಾಶ ಜ್ಯೋತಿ' ಹಾಗೂ 'ಹೂ ಬಾಡಿದಾಗ', ಎಸ್. ಎಂ. ಜನವಾಡಕರ್ ಅವರ 'ಮಾಸಿದ ಹಾಸಿಗೆ', ಮಾಣಿಕ ಭೂರೆಯವರ 'ನಾವು', ಎಸ್. ಎಸ್. ಹೊಡಮನಿಯವರ 'ಪ್ರೇಮಿಗಳು ಕೂಡಿದಾಗ', ರುಕ್ಮೋದ್ದಿನ್ ಇಸ್ಲಾಂಪೂರ ಅವರ 'ಕಣ್ಣಂಚಿನ ನೀರು', ರಾಜೇಂದ್ರ ಯರನಾಳೆಯವರ(ಕುಯವೀರ) ಅವರ 'ಮೊಮ್ಮಕ್ಕಳ ಭಾಗ್ಯ ಸಂಗವಜ್ಜಿಗ್ಯಾಕಿಲ್ಲ', ಯಶೋದಮ್ಮ ಸಿದ್ದಬಟ್ಟೆಯವರ 'ಮಂಗಳಾ', ಬೀದರನ ಪ್ರಮುಖ ಕಾದಂಬರಿಗಾರ್ತಿ ಸಾಧನಾ ರಂಜೋಳಕರ್‌ರವರು ಅಪೂರ್ವ ಕಾದಂಬರಿಗಳನ್ನು ನೀಡಿದವರು. ಅವರ 'ಕಥೆಯೊಳಗೊಂದು ಕಾದಂಬರಿ', 'ಲೇಖನಿ', 'ಸಿಡಿಲು' ಕಾದಂಬರಿಗಳು. ಜಯದೇವಿ ಗಾಯಕವಾಡರವರ 'ಯಾಜ್ಞಸೇನಿಯ ಆತ್ಮಕಥನ', ಪ್ರಿಯಾ ಲಂಜವಾಡಕರ್ ಅವರ 'ತಲ್ಲಣಿಸದಿರು', ಸುನೀತಾ ಬಿರಾದಾರ ಅವರ 'ಒಲಿದ ಜೀವ', ಕಾದಂಬರಿಯನ್ನು ರಚಿಸಿದ್ದಾರೆ. ವಾಗ್ದೇವಿ ಪಾಟೀಲರ 'ಜೀವನ ಸಂಗ್ರಾಮ', ವೀರನಗೌಡರ 'ಪ್ರತಿಬಿಂಬ', ಕಾಶಿ ಅವರ 'ದಾಹ', ಕೇಶವ ಮಳಗಿಯವರ 'ನಯನ', 'ಕುಂಕುಮಭೂಮಿ', ಸರಿತಾ ಕುಸನೂರರ 'ನೆಲಕಡಲು', ಬಂಡೆಪ್ಪಹಳ್ಳಿಯವರ 'ಹೊಣೆಗಾರಿಕೆಯ ಅಪವಾದ', ಸಿ. ಎಸ್. ಹಿರೇಮಠರ 'ಜ್ಯೋತಿ ಬೆಳಗುತ್ತಿದೆ', 'ಪರಿಪೂರ್ಣದೆಡೆಗೆ', ವಿಶ್ವನಾಥ ದೇಸಾಯಿಯವರ 'ಬಳ್ಳಿ ಬಾಡಲಿಲ್ಲ', ಜಿ. ಎನ್. ಸುಶೀಲಾದೇವಿಯವರ 'ಸ್ವಾಭಿಮಾನ', ಉಪಾಸಿ ಬಸವರಾಜರ 'ವೈಶಾಲಿ', ಡಿ. ಎಸ್. ಕಲ್ಮಠ ಅಲವಂಡಿಯವರ 'ವಿಪೂರ್ವ ಸುಳಿ', ಎಸ್. ಆರ್. ಗುರುನಾಥರ 'ಒಡಂಬಡಿಕೆ', ಎಸ್. ಜಿ. ಚಿನ್ನಾಳಿಯವರ 'ಕಾಯಕಯೋಗಿ' ಕೆ. ಬಿ. ನಿರಾಳಡ ಅವರ 'ಮಹಾಬಯಕೆ', ಬಸವರಾಜ ಪಾಟೀಲರ 'ಸ್ವಾರ್ಥಗಳು', ಎಸ್. ವಿ. ಪಾಟೀಲರ 'ತ್ಯಾಗಜೀವಿ', ಶೇಖರಗೌಡ ಗುಮಗೇರಿಯವರ 'ತ್ರಿಶಂಕು', ಲಿಂಗಸೂರ ವಿಠಲರಾವ್‌ರ 'ಒಂದು ಮಠದ ಚಂದರ', ಅಮರಯ್ಯ ಹಿರೇಮಠರ 'ವೈರಾಗ್ಯ' ಮುಂತಾದವು.

ಹೀಗೆ ಕಾದಂಬರಿ ಸಾಹಿತ್ಯ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತುಂಬಾ ಹುಲುಸಾಗಿ, ಸಮೃದ್ಧವಾಗಿ ಬೆಳೆದಿದೆ. ಈ ಲೇಖನವು ನನ್ನ ಅಧ್ಯಯನದ ಮಿತಿಯಲ್ಲಿ ಸಿದ್ಧಗೊಂಡಿದೆ. ಇನ್ನೂ ಅನೇಕ ಲೇಖಕರ ಕಾದಂಬರಿಗಳು ಹಾಗೂ ಅವರ ಹೆಸರುಗಳು ಇಲ್ಲಿ ದಾಖಲಾಗಿರಲಿಕ್ಕಿಲ್ಲ. ನನ್ನ ಅಧ್ಯಯನದ ಮಿತಿಯಲ್ಲಿ ದೊರೆತ ಆಕರಗಳಿಂದ ಈ ಲೇಖನ ರೂಪುಗೊಂಡಿದೆ ಅದಕ್ಕಾಗಿ ಸಹೃದಯರು ಸಹಕರಿಸುವರೆಂದು ಭಾವಿಸುವೆ. ಕಾದಂಬರಿ ದೀರ್ಘ ಕಥಾ ಹಂದರ ಹೊಂದಿರುವುದರಿಂದ ಲೇಖನದಲ್ಲಿ ಪುಟಗಳ ಮಿತಿಯಿಂದಾಗಿ ಕೇವಲ ಕಾದಂಬರಿಕಾರರ ಹೆಸರುಗಳನ್ನಷ್ಟೇ ಇಲ್ಲಿ ದಾಖಲಿಸಲು ಸಾಧ್ಯವಾಗಿದೆ.

**ಆಕರ ಗ್ರಂಥಗಳು :**

1. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್. ಎಸ್. ಶೇಷಗಿರಿರಾವ, ಅಂಕಿತ ಪುಸ್ತಕ, ಗಾಂಧಿ ಬಜಾರ್, ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು, 2013.
2. ಹೈದ್ರಾಬಾದ ಕರ್ನಾಟಕ ಹೊಸಗನ್ನಡ ಸಾಹಿತ್ಯದ ಜನಪರ ನಿಲುವುಗಳು, ಡಾ. ಶೀಲಾದೇವಿ ಎಸ್. ಬಿರಾದಾರ, ಪಿಹೆಚ್.ಡಿ ಪ್ರಬಂಧ, ರಚನಾ ಪಬ್ಲಿಸಿಂಗ್ ಸೊಸೈಟಿ(ರಿ), ಶರಣಬಸವೇಶ್ವರ ದೇವಾಲಯದ ಸಮೀಪ, ಕುಂಬಾರ ಓಣಿ, ಕಲಬುರ್ಗಿ, 2018.
3. ಡಾ. ಗವಿಸಿದ್ದಪ್ಪ ಪಾಟೀಲ ಹಾಗೂ ಡಾ. ಶಿವಗಂಗಾ ರುಮ್ಮಾ ಅವರ ಲೇಖನಗಳು, ಸೌಮ್ಯಸಿರಿ(ಪ್ರೊ. ಸಿದ್ರಾಮಪ್ಪ ಮಾಸಿಮಾಡೆ ಅವರ ಷಷ್ಟ್ಯಬ್ದಿ ಅಭಿನಂದನ ಗ್ರಂಥ) ಅಭಿನಂದನಾ ಸಮಿತಿ, ಬಸವನಗರ, ಬೀದರ. 2022.